# ದ್ಯಾಮ್ರ ಯಮ್ನವ್ವ ಮತ್ತು ಇತರ ಕಥೆಗಳು

ಡಾ. ಶ್ರೀಶೈಲ ರುದ್ರಪ್ಪ ಗೋಲಗೊಂಡ



**DYAMRA YAMNAVVA MATTU ITARA KATHEGALU**
A collection of short stories in Kannada by Dr. S. R. Golagond.
V.M.S.R. Vastrad Arts, Science & V. S. Bellihal Commerce College, Hungund
Published by : Savinaya Prakashan, Manikanth nagar Hungund-587 118
Printed at : Mallikarjun Printing Press Hungund

**ದ್ಯಾಮ್ರ ಯಮ್ನವ್ವ ಮತ್ತು ಇತರ ಕಥೆಗಳು**

ಲೇಖಕರು : ಡಾ. ಎಸ್. ಆರ್. ಗೋಲಗೊಂಡ

ಪ್ರಕಾಶಕರು : ಸವಿನಯ ಪ್ರಕಾಶನ
ಮಣಿಕಂಠ ನಗರ, ಚಿತ್ತವಾಡಿಗಿ ರಸ್ತೆ
ಹುನಗುಂದ-587 118 ಬಾಗಲಕೋಟ ಜಿಲ್ಲೆ
ಮೊ: 9980400421

ಹಕ್ಕುಗಳು : ಲೇಖಕರು

ಪ್ರಥಮ ಮುದ್ರಣ : 2017

ಪ್ರತಿಗಳು : 1000

ಪುಟಗಳು : xiv+104

ಆಕಾರ : ಡೆಮಿ 1/8

ಬಳಸಿದ ಕಾಗದ : 70 ಜಿ.ಎಸ್.ಎಂ. ಎನ್.ಎಸ್.

ಬೆಲೆ : 100/-

ಮುಖಪುಟ ವಿನ್ಯಾಸ
ಮತ್ತು ಮುದ್ರಣ : ಮಲ್ಲಿಕಾರ್ಜುನ ಆಪ್‌ಸೆಟ್ ಪ್ರಿಂಟಿಂಗ್ ಪ್ರೆಸ್
ಮಾರುತಿ ದೇವಸ್ಥಾನ ಎದುರಿಗೆ ಮೇನ ಬಜಾರ
ಹುನಗುಂದ-587 118



ಕಥೆ ಹೇಳುವ, ಕೇಳುವ ಪರಂಪರೆ ತುಂಬಾ ಪ್ರಾಚೀನವಾದುದು. ಜಾಗತಿಕ ಸಾಹಿತ್ಯ ಚರಿತ್ರೆಯಲ್ಲಿ "ಕಥೆ'ಗೆ ತನ್ನದೆ ಆದ ವಿಶೇಷ ಮನ್ನಣೆಯಿದೆ. ಯಾಕೆಂದರೆ ಕಥೆ ಕೇಳುವ ಕೇಳುಗನಿಗೆ, ಓದುವ ಓದುಗನಿಗೆ, ಮಾತ್ರವಲ್ಲದೆ ಪ್ರತಿಯೊಬ್ಬರನ್ನು ಆಕರ್ಷಿಸಿ, ರಂಜಿಸುವ ಅತ್ಯಂತ ಪ್ರಭಾವಶಾಲಿ ಶಕ್ತಿಯುಳ್ಳದ್ದು. ಕಥೆಗಳನ್ನು ಕೇಳದಿರುವ, ಇಷ್ಟಪಡದಿರುವ ಮಾನವರುಂಟೆ? ಖಂಡಿತವಾಗಿಯೂ ಇರಲಿಕ್ಕಿಲ್ಲ. ಅಂತಹ ಸಮ್ಮೋಹಕ ಶಕ್ತಿ ಅದಕ್ಕುಂಟು. ಹೀಗಾಗಿ ಸಾಹಿತ್ಯದ ಪ್ರಕಾರಗಳಲ್ಲಿ "ಸಣ್ಣಕಥೆ' ಎಂಬ ಹೆಸರಿನಿಂದ ಜನಪ್ರಿಯವಾಗಿದೆ.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಖ್ಯಾತನಾಮ ಕಥೆಗಾರರು ನಾನಾ ವಸ್ತುವಿನಿಂದ ವೈವಿಧ್ಯಮಯವಾದ ಕಥೆಗಳನ್ನು ರಚಿಸಿ ಕಥಾಜಗತ್ತನ್ನು ಶ್ರೀಮಂತಗೊಳಿಸಿದ್ದಾರೆ. ಪ್ರಸ್ತುತ ಸಂದರ್ಭದ ಹೊಸ ತಲೆಮಾರಿನ ಕಥೆಗಾರರಲ್ಲಿ ಡಾ. ಶ್ರೀಶೈಲ ಗೋಲಗೊಂಡ ಅವರು ಒಬ್ಬರು. ಸದ್ಯ ಶ್ರೀಯುತರು ಹುನಗುಂದದ ವಿಜಯ ಮಹಾಂತೇಶ ಮಹಾವಿದ್ಯಾಲಯದಲ್ಲಿ ಇಂಗ್ಲೀಷ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಯ ಬಗ್ಗೆ ಆಸಕ್ತಿಯುಳ್ಳ ಇವರು ಸುಮಾರು ಹದಿನೈದು ವರ್ಷಗಳಿಂದ ಕಥೆಗಳನ್ನು ಬರೆಯುತ್ತ, ಬೇರೆ-ಬೇರೆ ಪತ್ರಿಕೆಗಳಲ್ಲಿ ಪ್ರಕಟಿಸುತ್ತಾ ಬಂದಿದ್ದಾರೆ. ಆ ಎಲ್ಲ ಕಥೆಗಳ ಸಂಗ್ರಹ ರೂಪದ ಸಂಕಲನವಿದು.

"ದ್ಯಾಮ್ರ ಯಮ್ನವ್ವ ಹಾಗೂ ಇತರ ಕಥೆಗಳು' ಇದು ಗೋಲಗೊಂಡ ಅವರ ಪ್ರಥಮ ಕಥಾಸಂಕಲನ. ಕಥೆಗಾರರ ಗ್ರಾಮೀಣ ಪರಿಸರದ ಗಟ್ಟಿಯಾದ ಜೀವನಾನುಭವವು ಹರಳುಗೊಂಡು ಇಲ್ಲಿ ಕಥೆಗಳಾಗಿ ರೂಪ ತಾಳಿವೆ. ಇಲ್ಲಿರುವ ಹತ್ತು ಕಥೆಗಳು ಕಥೆಗಾರರ ವಸ್ತು ವೈವಿಧ್ಯತೆಗೆ, ಕಲ್ಪನಾಶಕ್ತಿಯ ಅಗಾಧತೆಗೆ, ಕಥೆಕಟ್ಟುವ ಆಕರ್ಷಕ ರೀತಿಗೆ, ಭಾಷೆಯ ಹೃದ್ಯತೆ ಹಾಗೂ ಕಲಾತ್ಮಕ ನಿರೂಪಣೆಗೆ ಸಾಕ್ಷಿಯಾಗಿ ನಿಂತಿವೆ. ಮನುಷ್ಯನಲ್ಲಿರುವ ಮೂಢನಂಬಿಕೆ, ಮೋಸ-ವಂಚನೆ, ಸುಳ್ಳು-ಪ್ರತಿಷ್ಠೆ, ಸ್ವಾರ್ಥ, ಕುಡಿತ, ಕಾಮುಕತನ, ಬಡತನ, ಶ್ರಮಿಕತನ ಮೊದಲಾದವುಗಳನ್ನು ಇಲ್ಲಿನ ಕಥೆಗಳಲ್ಲಿ ಗ್ರಾಮ್ಯ ಹಾಗೂ ಗ್ರಾಂಥಿಕ ನೆಲೆಗಳೆರಡರಲ್ಲೂ ಮನಮುಟ್ಟುವಂತೆ ಚಿತ್ರಿಸಿದ್ದಾರೆ.

ಒಟ್ಟಿನಲ್ಲಿ ಇದು ಉತ್ತಮ ಸಣ್ಣಕಥಾ ಸಂಕಲನ. ಸಹೃದಯರಿಗೆ ಹಿಡಿಸಿ ಮೆಚ್ಚುಗೆ ಪಡೆಯುವ ಕಥೆಗಳು ಇಲ್ಲಿವೆ. ಕಥೆಗಾರರು ಇನ್ನೂ ಉತ್ತಮೋತ್ತಮ ಕಥೆಗಳನ್ನು ಬರೆದು ಶ್ರೀಶೈಲ ಪರ್ವತವಾಗಿ ಬೆಳೆಯಲೆಂದು ಆಶಿಸುವೆ.

**ಡಾ. ಮುರ್ತುಜಾ ಬಿ. ಒಂಟಿ**
ಕನ್ನಡ ಪ್ರಾಧ್ಯಾಪಕರು


**ಸವಿನಯ ಪ್ರಕಾಶನ**
**ಮಣಿಕಂಠ ನಗರ, ಹುನಗುಂದ**